# ‘ಸಣ್ಣ ಪಾತ್ರವೂ ದೊಡ್ಡ ಅವಕಾಶವೇ

ಚಂದು ಗೌಡ
**ಝೀ ಕನ್ನಡದ ತ್ರಿನಯನಿ ವಿಶಾಲ್**



**◆ ವಿಶಾಲ್‌ನ ವೈಶಾಲತೆ ಏನು?**

ಈ ಕಥೆಯಲ್ಲಿ ನಾನು ಅಮೆರಿಕದಿಂದ ಕರ್ನಾಟಕಕ್ಕೆ ಮರಳಿದ್ದೇನೆ. ನನ್ನ ಹೆತ್ತಮ್ಮನನ್ನು ಅಪ್ಪನ ಎರಡನೇ ಹೆಂಡತಿ ಸಾಯಿಸಿದ್ದಾರೆ. ಆಕೆ ಆಸ್ತಿ ಕಬಳಿಸಲು ನನ್ನನ್ನೂ ಸಾಯಿಸಲು ಯೋಜಿಸಿದ್ದಾಳೆ. ತ್ರಿನಯನಿಗೆ ಇದೆಲ್ಲ ಚೆನ್ನಾಗಿ ಅರ್ಥವಾಗುತ್ತದೆ. ಆಕೆ ಭವಿಷ್ಯದ ಸಂಭವನೀಯತೆ ಎಲ್ಲ ಅರ್ಥಮಾಡಿಕೊಳ್ಳುತ್ತಾಳೆ. ಅವಳು ನನ್ನನ್ನು ಕಾಪಾಡಲು ಅಣಿಯಾಗುತ್ತಾಳೆ. ನನ್ನ ರಕ್ಷಣೆಗೆ ಆಕೆ ಸೂಕ್ತ ಎಂದು ನಮ್ಮಪ್ಪ ಅವಳ ಜೊತೆ ಮದುವೆ ಮಾಡಿಸುತ್ತಾರೆ. ಮೊದಲು ಹಳ್ಳಿಹುಡುಗಿ ಎಂದು ನಾನೇ ಜರಿಯುತ್ತಿರುತ್ತೇನೆ. ಸತ್ಯ ಅರಿತು ನಾನೂ ಅವಳನ್ನು ಇಷ್ಟಪಡಲು ಆರಂಭಿಸುತ್ತೇನೆ.

**◆ ಬೇರೆ ಬೇರೆ ಪಾತ್ರಗಳ ನಿರ್ವಹಣೆ ಮಾಡುವುದು ಹೇಗೆನಿಸುತ್ತದೆ?**

ನಟನಾ ವೃತ್ತಿಯ ನಿರೀಕ್ಷೆ ಖಂಡಿತ ನಾನು ಮಾಡಿರಲಿಲ್ಲ. ‘ಗೃಹಲಕ್ಷ್ಮಿ’ಗೆ ಮೊದಲ ಆಡಿಷನ್ ನೀಡಿದ್ದೆ. ಆ ಒಂದು ಪ್ರಯತ್ನ ಫಲಪ್ರದವಾಯಿತು. ಅಂದು ಈ ಮಟ್ಟದ ಜನಪ್ರಿಯತೆಯನ್ನು ತಂದುಕೊಡುತ್ತದೆ ಎಂದು ಯೋಚನೆಯೂ ಇರಲಿಲ್ಲ. ನಂತರ ‘ಲಕ್ಷ್ಮೀಬಾರಮ್ಮ’ ಮಾಡಿದೆ. ಅದೂ ಚೆನ್ನಾಗಿತ್ತು. ದರ್ಶನ್ ಅವರ ಜೊತೆ ‘ರಾಬರ್ಟ್’ ಸಿನಿಮಾದಲ್ಲಿ ನೆಗೆಟಿವ್ ಪಾತ್ರ ಮಾಡಿದೆ. ನಾನೇ ನಾಯಕನಾಗಿ ನಟಿಸಿರುವ ಮೂರು ಸಿನಿಮಾಗಳು ಬಿಡುಗಡೆಯಾಗಬೇಕಿದೆ.

**◆ ಕಿರುತೆರೆ ಮತ್ತು ಹಿರಿತೆರೆಯ ನಡುವಿನ ಅಂತರ ನೀವು ಗುರುತಿಸಿದಂತೆ.**

ನಟನೆಯ ವಿಚಾರದಲ್ಲಿ ಹೇಳುವುದಾದರೆ ವ್ಯತ್ಯಾಸವೇನೂ ಇಲ್ಲ. ಯಾವ ಪಾತ್ರ ಆದರೂ ಅದಕ್ಕೆ ನ್ಯಾಯವನ್ನು ಕೊಡಬೇಕು. ಅದು ಕಿರುತೆರೆ ಆಗಲಿ ಹಿರಿತೆರೆ ಆಗಲಿ, ಅದನ್ನು ಪರಿಪೂರ್ಣ ಮಾಡಬೇಕು. ದೊಡ್ಡ ಪರದೆ ಆದರೆ ಪರಿಣಾಮವೂ ದೊಡ್ಡಮಟ್ಟದಲ್ಲಿ ಆಗುತ್ತದೆ. ನನಗೆ ಕಿರುತೆರೆ–ಹಿರಿತೆರೆ ಎನ್ನದೆ ಪ್ರೀತಿಯನ್ನು ಜನ ನೀಡಿದ್ದಾರೆ. ಅದು ನಿಜಕ್ಕೂ ಖುಷಿಕೊಡುತ್ತದೆ.

**◆ ಬಣ್ಣದ ಲೋಕವನ್ನು ಪ್ರವೇಶಿಸಿದ ದಿನಗಳು ಹೇಗಿದ್ದವು?**

ಬಣ್ಣ ಹಚ್ಚಿದ ಆರಂಭದಲ್ಲಿ ತುಂಬ ಕಷ್ಟಪಟ್ಟಿದ್ದೇನೆ. ನಮ್ಮ ತಂದೆ ಉದ್ಯಮಿ. ಬಾಲ್ಯದಿಂದಲೂ ಕಷ್ಟ ಎಂದರೆ ಏನೆಂದೂ ಗೊತ್ತಿರಲಿಲ್ಲ. ಪಾತ್ರ ಅಂದರೆ ಏನು ಅಂತ ಕೂಡ ಗೊತ್ತಾಗುತ್ತಿರಲಿಲ್ಲ. ಪಾತ್ರದಲ್ಲಿ ತಲ್ಲೀನ ಆಗುವುದು ಗೊತ್ತಿರಲಿಲ್ಲ. ಆಗ ಅದನ್ನು ಕಲಿಯಲು ಅವಕಾಶ ಮಾಡಿದವರು ನಿರ್ದೇಶಕ ಕೃಷ್ಣ. ಆ ಅವಕಾಶದಿಂದಲೇ ಇಲ್ಲಿಯವರೆಗೆ ಬೆಳೆದೆ. ನನಗೆ ಈ ಕ್ಷೇತ್ರದ ಪರಿಚಯವೂ ಇರಲಿಲ್ಲ. ಹೀಗಿದ್ದಾಗ ಒಂದು ಸಣ್ಣ ಅವಕಾಶ ಪಡೆಯುವುದೂ ದೊಡ್ಡ ಕೆಲಸವೇ ಸರಿ. ಸ್ವಆಸಕ್ತಿಯಿಂದ ಬಂದ ನನಗೆ ದೊಡ್ಡಮಟ್ಟದ ನೆಲೆ ಇಲ್ಲಿ ಸಿಕ್ಕಿದೆ. ಯಾವತ್ತೂ ಹಗಲು ರಾತ್ರಿಗಳ ಪರಿವೆ ಇಲ್ಲದೆ ಕೆಲಸ ಮಾಡಿರಲಿಲ್ಲ. ಇಲ್ಲಿ ಅದು ಮಾಮೂಲಿ ಆಯಿತು. ನಮ್ಮ ತಾಯಿ ‘ಯಾವುದೂ ಸುಲಭಕ್ಕೆ ಸಿಗುವುದಿಲ್ಲ. ಏನಾದರೂ ಮಾಡಬೇಕು ಅಂದರೆ ಕಷ್ಟಪಡಬೇಕು’ ಎಂದು ಹೇಳಿದರು. ಅವರ ಪ್ರೇರಣೆಯ ಮಾತಿನಿಂದ ಆಗಿದ್ದಾಗಲಿ ಎಂದು ನಟಿಸಿದೆ. ಇಲ್ಲದಿದ್ದರೆ ಇಲ್ಲಿಯ ತನಕ ಬೆಳೆಯುತ್ತಿರಲಿಲ್ಲ. ನಾನು ಪಾತ್ರವನ್ನು ಆಯ್ಕೆ ಮಾಡಿಕೊಳ್ಳುವಾಗ ಅದಕ್ಕೊಂದು ತೂಕ ಇರಬೇಕು. ಅದರ ಗುಣಾವಗುಣಗಳು ಏನೇ ಇದ್ದರೂ ಕತೆಯಲ್ಲಿ ಪ್ರಾಮುಖ್ಯತೆ ಇರಬೇಕು.

**◆ ನಟನಿಗೆ ಏನು ಜವಾಬ್ದಾರಿ ಇರುತ್ತವೆ?**

ನಮ್ಮನ್ನು ಯಾರಾದರೂ ಒಬ್ಬರು ಅನುಸರಿಸುತ್ತಾರೆ ಎಂದಾದರೆ, ಪಾತ್ರ ಏನೇ ಇದ್ದರೂ ಒಳ್ಳೆಯದನ್ನು ಮಾಡಬೇಕು. ಪಾತ್ರ ನಿರ್ವಹಣೆ ನೆಗೆಟಿವ್ ಇರಬಹುದು. ಆದರೆ ದೊಡ್ಡವರಿಗೆ ಗೌರವ ಕೊಡಬೇಕು. ವೈಯಕ್ತಿಕವಾಗಿ ಏನು ಮಾಡುತ್ತೇನೆ ಎನ್ನುವ ಪ್ರಜ್ಞೆ ಇರಬೇಕು. ನನ್ನ ನಡೆ ನುಡಿ ನಡತೆ ಯಾವತ್ತೂ ತಪ್ಪು ಸಂದೇಶವನ್ನು ಕೊಡುವಂತೆ ಇರಬಾರದು ಎಂದು ಯೋಚಿಸುತ್ತೇನೆ. ಸಮಾಜಮುಖಿ ಕೆಲಸಗಳು ಎಂದು ಬಂದಾಗ ಅದು ನನ್ನ ದುಡಿಮೆಯದ್ದೇ ಆಗಬೇಕು. ನನ್ನ ಪಾಲಿನ ನಿರ್ವಹಣೆಯನ್ನು ನನ್ನ ಪಾಡಿಗೆ ಮಾಡುತ್ತೇನೆ. ನನ್ನ ಹತ್ತಿರ ಐಷಾರಾಮಿ ಕಾರು ಬೈಕುಗಳಿವೆ. ಹಣಕಾಸಿಗೆ ತೊಂದರೆ ಇಲ್ಲ. ಏನೇ ಮಾಡಿದರು ಅದನ್ನು ಖುಷಿ ಮತ್ತು ಪ್ರೀತಿಯಿಂದ ಮಾಡುತ್ತೇನೆ. ಅದನ್ನು ಎಲ್ಲಿಯೂ ಬಿಂಬಿಸಿಕೊಳ್ಳಲು ಮನಸ್ಸು ಇಲ್ಲ

**◆ ಬಹುಭಾಷೆಯಲ್ಲಿ ಪಾತ್ರ ನಿರ್ವಹಿಸುವಾಗ ಎದುರಾಗುವ ಸವಾಲುಗಳು ಏನು?**

ಬಹುದೊಡ್ಡ ಸವಾಲು ಎಂದರೆ ಭಾಷೆ. ಭಾಷೆ ಅರ್ಥ ಆಗಲಿಲ್ಲ ಅಂದರೆ ಮತ್ತೆ ಇನ್ನೇನು ಮಾಡಲು ಸಾಧ್ಯ? ಎಲ್ಲ ಭಾಷೆಯನ್ನೂ ಗೌರವಿಸಬೇಕು. ನಮ್ಮ ಭಾಷೆಯನ್ನು ಪ್ರೀತಿಸಬೇಕು. ಬೇರೆ ಭಾಷೆಯಲ್ಲಿ ನಟಿಸುವಾಗ ಅದನ್ನು ತಿಳಿಯುವ ಮಟ್ಟಿಗಾದರೂ ಕಲಿಯಬೇಕು. ಅವೂ ಅನೇಕರಿಗೆ ಉದ್ಯೋಗ ಕೊಟ್ಟಿವೆ ಎನ್ನುವುದನ್ನು ಮರೆಯಬಾರದು. ನಾನು ಚೆನ್ನಾಗಿದ್ದರೆ ಮತ್ತೊಬ್ಬರಿಗೆ ಕೊಡಲು ಸಾಧ್ಯ. ಹಣ ನನಗೆ ಮುಖ್ಯ ಅಲ್ಲ. ಬೇರೆಯವರಿಗೆ ಕೊಡುವುದು ಮುಖ್ಯ. ನಾಯಕಿ ಕನ್ನಡದವರು ಅವರಿಗೆ ತೆಲುಗು ಚೆನ್ನಾಗಿ ಗೊತ್ತು. ಅವರು ಹೇಳಿಕೊಡುತ್ತಾರೆ. ಅಮ್ಮನ ಪಾತ್ರಧಾರಿಗೂ ತೆಲುಗು ಗೊತ್ತು. ಹಾಗಾಗಿ ಕನ್ನಡ–ತೆಲುಗು ಎರಡರಲ್ಲೂ ನಟಿಸಲು ಅನುಕೂಲವಾಗುತ್ತಿದೆ.

**■ ರಾಘವೇಂದ್ರ ಕೆ.**